



- ಬಹುತೇಕ ಮರ್ಯಾದಾ ಹತ್ಯೆಗಳು ನಡೆದಿದ್ದು, ನಡೆಯುವುದು ಮಧ್ಯಮ ವರ್ಗ, ಬಡಜನತೆಯ ಮನೆಗಳಲ್ಲಿ. ಮೇಲ್ವರ್ಗದಲ್ಲಿ ಜಾತಿ ಮೀರಿದ ಧರ್ಮ ಮೀರಿದ ಮದುವೆಗಳು ನಡೆದಿವೆ ಎಂಬುದನ್ನು ಗಮನಿಸಬೇಕು.
- ರಾಜಕಾರಣಿಗಳು, ಶಾಸಕರ ಮಂತ್ರಿಗಳು, ಅಧಿಕಾರಿಗಳು, ಕೋಟ್ಯಾಧೀಶರು ಮುಂತಾದವರ ಕುಟುಂಬಗಳಲ್ಲಿ ಅನ್ಯ ಜಾತಿಯ ಧರ್ಮದ ಸಂಬಂಧಗಳು ಏರ್ಪಟ್ಟಿವೆ. ಅಲ್ಲಿ ಪ್ರೇಮ ಮತ್ತು ಪರಸ್ಪರ ಗೌರವವೇ ಮುಖ್ಯ.
- ಸಾಮಾಜಿಕ ಬದಲಾವಣೆಯ ಕನಸುಗಳನ್ನು ಹೊತ್ತವರು ಜಾತಿ ಧರ್ಮ ಅಂತಸ್ತು ಮೀರಿದ ಪ್ರಬುದ್ಧ ನಡೆಯುಳ್ಳವರು ನಾಡಿನಾದ್ಯಂತ ಕಾಣಿಸುವರು. ಅಲ್ಲಿ ವ್ಯಕ್ತಿ ಘನತೆ, ಆರ್ಥಿಕ ಸಮಾನತೆ ಮತ್ತು ಪ್ರಾಂಜಲವಾದ ಪ್ರೇಮ ನೋಡಬಹುದು.

ಸಮುದಾಯಗಳನ್ನು ಕೀಳೀಕರಿಸಿ ಲಿಂಗಾಯತ ಎನ್ನುವ ಜಾತಿಯು ಶ್ರೇಷ್ಠೀಕರಿಸಿರುವುದರಿಂದ ಮತ್ತೆ ಜಾತಿ ಜಾಡ್ಯದ ವಿಷವು ಸಮಾಜವನ್ನು ಆವರಿಸಿ ಪ್ರಕಾಶಗೌಡ ಪಾಟಿಲ ಎಂಬ ವ್ಯಕ್ತಿಯು ತನ್ನದೇ ಬಂಧುಸಮುದಾಯದ ಮೇಲೆ ದಾಳಿ ಮಾಡಿ ಮಗಳನ್ನು ಕೊಂದಿರುವನು.

### ಆರ್ಥಿಕ ದಾಳಿಯೊಳಗೆ ಅಡಕವಾದ ಸಾಮಾಜಿಕ ತಾರತಮ್ಯ

ಆರ್ಥಿಕ ಸಮಾನತೆಯೊಂದಿಗೆ ಸಾಮಾಜಿಕ ಬದಲಾವಣೆಗಾಗಿ ರಾಜಕೀಯ ಪ್ರಜ್ಞೆಯನ್ನು ಮೂಡಿಸುವಲ್ಲಿ ಜಗತ್ತಿನ ಅನೇಕ ನಿದರ್ಶನಗಳು ನಮ್ಮ ಮುಂದಿವೆ. ಮರ್ಯಾದೆ ಹೆಸರಿನ ಮರ್ಯಾದಗೇಡು ಹತ್ಯೆಗಳು ಯಾವ ವರ್ಗದಲ್ಲಿ ನಡೆದಿವೆ ಎಂಬುದನ್ನು ನೋಡಬೇಕಿದೆ. ಬಹುತೇಕ ಮರ್ಯಾದಾ ಹತ್ಯೆಗಳು ನಡೆದಿದ್ದು ಮಧ್ಯಮ ವರ್ಗ, ಬಡಜನತೆಯಲ್ಲಿ. ಮೇಲ್ವರ್ಗದಲ್ಲಿ ಜಾತಿ ಮೀರಿದ ಧರ್ಮ ಮೀರಿದ ಮದುವೆಗಳು ನಡೆದಿವೆ. ರಾಜಕಾರಣಿಗಳು, ಶಾಸಕರ ಮಂತ್ರಿಗಳು, ಅಧಿಕಾರಿಗಳು, ಕೋಟ್ಯಾಧೀಶರು ಮುಂತಾದವರ ಕುಟುಂಬಗಳಲ್ಲಿ ಅನ್ಯ ಜಾತಿಯ ಧರ್ಮದ ಸಂಬಂಧಗಳು ಏರ್ಪಟ್ಟಿವೆ.

ಆದರೆ ಅವೆಲ್ಲ ಮಾನ್ಯವಾಗಿಸುವ ದೊಡ್ಡ ಶಕ್ತಿ ಇರುವುದು ಅವರ ಆರ್ಥಿಕ ಬಲಾಢ್ಯತೆಗೆ. ಅಷ್ಟೇ ಏಕೆ, ಇತರೆ ಧರ್ಮದವರೊಂದಿಗೆ ಮಾತೂ ಆಡಬಾರದೆಂದು ಹೇಳುವ ರಾಜಕೀಯ ವ್ಯಕ್ತಿಗಳ ಕುಟುಂಬದಲ್ಲಿ ಅನ್ಯ ಧರ್ಮೀಯ ಅಳಿಯ ಅಥವಾ ಸೊಸೆ ಇರುವರು. ಅವರಿಗೇಕೆ ಮನುಸ್ಮೃತಿಯ ಶ್ಲೋಕಗಳು ಅಪ್ಲೈ ಆಗುವುದಿಲ್ಲ? ಮರ್ಯಾದೆ ಹೆಸರಿನ ಹತ್ಯೆಗಳು ನಡೆದಿಲ್ಲ? (ಅಲ್ಲಿಯೂ ಕೆಲವು ಮರ್ಯಾದಾ ಹೆಸರಿನ ಹತ್ಯೆಗಳು ನಡೆದಿರುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗದು) ಏಕೆಂದರೆ ಅವರು ಎಲ್ಲ ಹಂತಗಳಲ್ಲಿಯೂ ಬಲಾಢ್ಯರಾಗಿರುವರು.

ಒಂದು ವೇಳೆ ಕೊಲೆಯಾದ ಮಾನ್ಯಳ ಗಂಡನಾದವನು ಅಥವಾ ಅವರ ಕುಟುಂಬವು ಕೋಟ್ಯಾಧೀಶರಾಗಿದ್ದಲ್ಲಿ ಕೊಲೆ ಮಾಡಿದ ಪ್ರಕಾಶಗೌಡ ಪಾಟೀಲನ ವರ್ತನೆ ಹೀಗಿರಲು ಸಾಧ್ಯವಿತ್ತೆ? ಯೋಚಿಸಬೇಕಾದ ವಿಷಯ ಹೌದಲ್ಲವೆ? ಅಂದರೆ ಸಮಾಜದಲ್ಲಿ ಆರ್ಥಿಕ ಅಸಮಾನತೆಯನ್ನು ಸೃಷ್ಟಿಸಿ ಆರ್ಥಿಕ ದುರ್ಬಲರ ಸಮುದಾಯಗಳಲ್ಲಿ ಜಾತಿ ತಾರತಮ್ಯ ಮತ್ತು ಮತೀಯ ದ್ವೇಷವನ್ನು ಹುಟ್ಟು ಹಾಕಿ ಮನಸ್ಮೃತಿಯ ಗಡಿಗಳನ್ನು ಮೀರದಂತೆ ಮನಸುಗಳನ್ನು ಕಟ್ಟಿಹಾಕಲಾಗಿದೆ. ಕುಟುಂಬದಲ್ಲಿಯೂ ಸಮಾಜದಲ್ಲಿಯೂ ಎರಡನೆಯ ದರ್ಜೆಯ ಪ್ರಜೆಯಾಗಿರುವ ಮಹಿಳೆಯರನ್ನು ಆಸ್ತಿಯ ಹಕ್ಕಿನಿಂದಲೂ ಆರ್ಥಿಕ ಸ್ವಾತಂತ್ರ್ಯದಿಂದಲೂ ವಂಚಿತರನ್ನಾಗಿಸಲು ನಿರಂತರ ಪ್ರಯತ್ನಗಳು ನಡೆದಿವೆ ಎಂಬುದು ಗಮನಿಸಬೇಕು. ಪ್ರೇಮವೆಂಬುದು ಸಹಜವಾಗಿ ಪ್ರಕಟವಾದಲ್ಲಿ ಜಾತಿ ಧರ್ಮ ಅಂತಸ್ತು ಅನನ್ಯತೆಯ ಕುಟುಂಬಗಳಲ್ಲಿನ ಕ್ರೌರ್ಯವು ಮರ್ಯಾದೆ ಹೆಸರಿನಲ್ಲಿ ಹತ್ಯೆಗಳನ್ನು ನಡೆಸಲಾಗುತ್ತಿದೆ.

ಮಹಿಳೆಯರನ್ನು, ದಲಿತರನ್ನು, ಶೂದ್ರರನ್ನು ಮನುಷ್ಯರೆಂದೇ ಪರಿಗಣಿಸಬಾರದೆಂದು ಭೋದಿಸುತ್ತದೆ ಮನುಸ್ಮೃತಿ.

ಇನ್ನೊಂದು ವಿಭಾಗದಲ್ಲಿ ಜಾತಿ ಧರ್ಮ ಅಂತಸ್ತು ಮೀರಿದ ಸಂಬಂಧಗಳು ಖಂಡಿತ ಏರ್ಪಟ್ಟಿವೆ. ಅಲ್ಲಿ ಪ್ರೇಮ ಮತ್ತು ಪರಸ್ಪರ ಗೌರವದ ಸಮಾನತೆಯ ವಿಚಾರಗಳನ್ನು ಆಧರಿಸಿದ ಮದುವೆಗಳು ನಡೆದಿವೆ. ಅವುಗಳ ಮೂಲ ಇರುವುದು ಚಿಂತನೆಗಳಲ್ಲಿ. ಸಾಮಾಜಿಕ ಬದಲಾವಣೆಯ ಕನಸುಗಳನ್ನು ಹೊತ್ತವರು ಜಾತಿ ಧರ್ಮ ಅಂತಸ್ತು ಮೀರಿದ ಪ್ರಬುದ್ಧ ನಡೆಯುಳ್ಳವರು ನಾಡಿನಾದ್ಯಂತ ಕಾಣಿಸುವರು. ಅಲ್ಲಿ ವ್ಯಕ್ತಿ ಘನತೆ, ಆರ್ಥಿಕ ಸಮಾನತೆ ಮತ್ತು ಪ್ರಾಂಜಲವಾದ ಪ್ರೇಮ ನೋಡಬಹುದು.

ಮಹಿಳೆಯರನ್ನು, ದಲಿತರನ್ನು, ಶೂದ್ರರನ್ನು ಮನುಷ್ಯರೆಂದೇ ಪರಿಗಣಿಸಬಾರದೆಂದು ಭೋದಿಸುತ್ತದೆ ಮನುಸ್ಮೃತಿ. ಮೇಲೆ ಉಲ್ಲೇಖಿಸಿದ ಎಲ್ಲ ಶ್ಲೋಕಗಳು ಇದನ್ನೇ ಧ್ವನಿಸುತ್ತವೆ. ಸಮಾಜದಲ್ಲಿನ ವಿದ್ಯಮಾನಗಳು ಸಹ ಇದನ್ನೇ ಪುಷ್ಟೀಕರಿಸುತ್ತವೆ. 2024–2025ರಲ್ಲಿ ದಲಿತರ ಮೇಲೆ ನಡೆದ ದೌರ್ಜನ್ಯಗಳು ಹಿಂದಿನ ವರ್ಷಕ್ಕಿಂತ ಜಾಸ್ತಿ. 2023–2024ರಲ್ಲಿ 3740 ಪ್ರಕರಣಗಳು ಘಟಿಸಿದರೆ, 2024–2025ರಲ್ಲಿ 5507 ಪ್ರಕರಣಗಳು ಘಟಿಸಿವೆ. ಇವುಗಳಲ್ಲಿ ಮರ್ಯಾದೆಗೇಡಿ ಹೆಸರಿನ ಹತ್ಯೆಗಳು ಸಹ ಸೇರಿವೆ. ಬೆಳಕಿಗೆ ಬಂದ ಮರ್ಯಾದೆಗೇಡು ಹತ್ಯೆಯ ಪ್ರಕರಣಗಳು ಕಡಿಮೆ. ಅನುಮಾನಾಸ್ಪದವಾಗಿ ಸಾವಿಗೀಡಾದ ಜೋಡಿ ಪ್ರಕರಣಗಳು ಪಟ್ಟಭದ್ರ ಹಿತಾಸಕ್ತಿಗಳ ಕೈವಾಡದಿಂದ ಮುಚ್ಚಿ ಹೋಗಿವೆ. ಸಮಾಜದಲ್ಲಿ ಪ್ರತಿರೋಧವೂ ಇಲ್ಲದೆ ಹೋದಲ್ಲಿ ಮತ್ತು ಸಜ್ಜನಿಕೆಯ ಮುಖವಾಡದ ಮೌನಗಳೇ ಇದ್ದಲ್ಲಿ ಅದು ಅಪಾಯವೇ ಹೌದು.

### ಪ್ರಭುತ್ವ ಮತ್ತು ಕಾನೂನಿಗೆ ತಾಯ್ತನದ ಕಣ್ಣಿರಬೇಕಿದೆ

ಇಷ್ಟೆಲ್ಲ ಮರ್ಯಾದೆಗೇಡಿ ಹತ್ಯೆಗಳು, ಜಾತಿ ಹೆಸರಿನ ದಾಳಿಗಳು ನಡೆದಾಗಲೂ ಪ್ರಭುತ್ವ ಮಾತಾಡಬಾರದೆ? ಹತ್ಯೆಗಳನ್ನು, ದಾಳಿಗಳನ್ನು ತಡೆಗಟ್ಟುವ ಹೊಣೆಗಾರಿಕೆ ಇಲ್ಲವೆ? ಭಾರತದ ಯುವಜನ ಚಳವಳಿಗಳು, ಮಹಿಳಾ ಚಳವಳಿಗಳು ಮತ್ತು ಮಾನವ ಹಕ್ಕುಗಳ ಚಳವಳಿಗಳು ಆಗ್ರಹಿಸುತ್ತಿರುವ ಹಕ್ಕೊತ್ತಾಯ ಏನೆಂದರೆ, ‘ಮರ್ಯಾದೆಗೇಡಿ ಹತ್ಯೆ ತಡೆ ಕಾಯ್ದೆ’ ರೂಪಿಸಿ ಎಂಬುದು. ಮರ್ಯಾದೆಗೇಡು ಹತ್ಯೆ ಕುರಿತಂತೆ ಸುಪ್ರೀಂ ಕೋರ್ಟ್ ಮಹತ್ವದ ಆದೇಶಗಳನ್ನು ನೀಡಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಆದೇಶಗಳನ್ನು ಜಾರಿಗೊಳಿಸುವ ಬದ್ಧತೆಯನ್ನು ವ್ಯಕ್ತಿಸಬೇಕು.

ಜೆ.ಎಸ್. ವರ್ಮ ಮತ್ತು ಉಗ್ರಪ್ಪ ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೊಳಿಸಬೇಕು. ಅಂತರ್ಜಾತಿ, ಅಂತರ್ ಧರ್ಮೀಯ ಮತ್ತು ಸ್ವಯಂ ಆಯ್ಕೆಯ ಮದುವೆಯಾಗುವ ಯುವಜೋಡಿಯ ರಕ್ಷಣೆಯ ಹೊಣೆಯನ್ನು ಸರಕಾರದ್ದಾಗಿದೆ. ಪ್ರಭುತ್ವವು ಲಿಂಗಸಂವೇದನಾಶೀಲತೆ ಮತ್ತು ಸಾಮಾಜಿಕ ನ್ಯಾಯದ ಪರವಾದ ಬದ್ಧತೆಯನ್ನು ದೃಢವಾಗಿ ಪ್ರಕಟಿಸಬೇಕು.

ಜಾತ್ಯತೀತ ಮೌಲ್ಯಗಳು, ಲಿಂಗ ಸಮಾನತೆ, ಸಾಮಾಜಿಕ ನ್ಯಾಯದ ಪರವಾಗಿ ಸಮಾಜವನ್ನು ಸಜ್ಜುಗೊಳಿಸಬೇಕು. ಆರ್ಥಿಕ ಸ್ವಾತಂತ್ರ್ಯವೆಂಬುದು ಅತ್ಯಗತ್ಯವಾದದ್ದು. ಆದ್ದರಿಂದ ಮರ್ಯಾದೆಗೇಡಿ ಹತ್ಯೆ ತಡೆ ಕಾಯ್ದೆ ರೂಪಿಸುವುದರೊಂದಿಗೆ ಆರ್ಥಿಕ ಸ್ವಾವಲಂಬನೆ, ಸರ್ಕಾರಿ ಖಾಸಗಿ ಫಲಾನುಭವದಲ್ಲಿ ಮೀಸಲಾತಿ ಮುಂತಾದ ತೀರ್ಮಾನಗಳು ಜೋಡಿ ಜೀವಗಳ ಭವಿಷ್ಯ ಕಟ್ಟಿಕೊಳ್ಳಲು ನೆರವಾಗುವುವು. ■